CPMG/KA/BG.GPO-13/2001

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೩೬ | ಬೆಂಗಳೂರು, ಗುರುವಾರ, ಏಪ್ರಿಲ್ ೧೨, ೨೦೦೧ (ಚೈತ್ರ ೨೨, ಶಕ ವರ್ಷ ೧೯೨೩) | ಸಂಚಿಕೆ

## ಭಾಗ - ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾಗಿ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು.

ಶಿಕ್ಷಣ ಸಚಿವಾಲಯ

ವಿಷಯ:- ಸಾರ್ವಜನಿಕ ಶಿಕ್ಷಣ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರು (ಕ್ರಾಫ್ಟ್) ಮತ್ತು ವಿಷಯ ಪರಿವೀಕ್ಷಕರು (ಕ್ರಾಫ್ಟ್) ಈ ವೃಂದಗಳಿಗೆ ನೇಮಕಾತಿ ವಿಧಾನವನ್ನು ನಿಗದಿಪಡಿಸುವ ಬಗ್ಗೆ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ : ಇಡಿ 10 ಡಿಪಿಐ 97, ದಿನಾಂಕ 12-7-1999.

2) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ : ಸಿಆಸುಇ 38 ಸೇನಿಇ 96 ದಿನಾಂಕ 1.8.1996.

ಪ್ರಸ್ತಾವನೆ:-

ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ದಿನಾಂಕ 12.7.1999ರ ಆದೇಶದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಹಾಗೂ ಪ್ರೌಢಶಾಲಾ ಹಂತದಲ್ಲಿನ ವೃತ್ತಿ ಶಿಕ್ಷಕರುಗಳ (ಕ್ರಾಫ್ಟ್) ವೃಂದವನ್ನು ಪುನರ್ ರಚನೆ ಮಾಡಿ, ಹಿರಿಯ ಸಹಾಯಕ ನಿರ್ದೇಶಕರು (ಕ್ರಾಫ್ಟ್) ಮತ್ತು ವಿಷಯ ಪರಿವೀಕ್ಷಕರು (ಕ್ರಾಫ್ಟ್) ಹಾಗೂ ಶೈಕ್ಷಣಿಕ ಸಹಾಯಕ ಹುದ್ದೆಗಳನ್ನು ಹೊಸದಾಗಿ ಸೃಜಿಸಲಾಗಿದೆ.

ವೃತ್ತಿ ಶಿಕ್ಷಣದ ಮೇಲ್ವಿಚಾರಣೆ, ಶೈಕ್ಷಣಿಕ ಬೋಧನ ವಿಧಾನಗಳ ಬಗ್ಗೆ ಸೂಕ್ತ ಸಲಹೆ-ಸೂಚನೆಗಳನ್ನು ನೀಡಿ, ಶಾಲಾ ಹಂತದ ವೃತ್ತಿ ಶಿಕ್ಷಣದ ಮಹತ್ವವನ್ನು ಪರಿಚಯ ಮಾಡಿ, ಈ ಶಿಕ್ಷಣವನ್ನು ಸಮಗ್ರ ವಿಚಾರಣೆಯನ್ನು ಮಾಡುವ ಹಿತದೃಷ್ಟಿಯಿಂದ ಪ್ರೌಢಶಾಲಾ ಗ್ರೇಡ್-1 ವೃತ್ತಿ ಶಿಕ್ಷಕರು ಹೊಂದಿರುವ ಜ್ಞಾನ ಮತ್ತು ಅನುಭವವನ್ನು ಅವರಿಗೆ ಉನ್ನತ ಹುದ್ದೆಗಳಲ್ಲಿ ಜವಾಬ್ದಾರಿಯನ್ನು ನೀಡಿ ತುರ್ತಾಗಿ ಉಪಯೋಗಿಸಿಕೊಳ್ಳುವ ಅವಶ್ಯಕತೆ ಇರುತ್ತದೆ. ಆದರೆ ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿಯ ನಿಯಮಗಳಲ್ಲಿ ಹಿರಿಯ ಸಹಾಯಕ ನಿರ್ದೇಶಕರು (ಕ್ರಾಫ್ಟ್), ವಿಷಯ ಪರಿವೀಕ್ಷಕರು (ಕ್ರಾಫ್ಟ್) ಮತ್ತು ಶೈಕ್ಷಣಿಕ ಸಹಾಯಕರು, ಈ ವೃಂದಗಳಿಗೆ ನೇಮಕಾತಿ ವಿಧಾನವನ್ನು ನಿಗದಿಪಡಿಸಿರುವುದಿಲ್ಲ.

ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇಮಕಾತಿ ವಿಧಾನವನ್ನು ನಿಗದಿಪಡಿಸದೇ ಇರುವ ಹುದ್ದೆಗಳಿಗೆ ನೇಮಕಾತಿ ವಿಧಾನವನ್ನು ಒಂದು ಕಾರ್ಯಕಾರಿ ಆದೇಶದ ಮೂಲಕ ನಿಗದಿಪಡಿಸಲು ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ದಿನಾಂಕ 1.8.1986ರ ಅಧಿಕೃತ ಜ್ಞಾಪನದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ : ಇಡಿ 183 ಡಿಪಿಐ 99 ಬೆಂಗಳೂರು, ದಿನಾಂಕ 28ನೇ ಏಪ್ರಿಲ್ 2000**

ಸರ್ಕಾರಿ ಆದೇಶ ದಿನಾಂಕ 12.7.1999 ರಲ್ಲಿ ಸೃಜಿಸಲಾದ ಸಾರ್ವಜನಿಕ ಶಿಕ್ಷಣ ಇಲಾಖೆಯ ವೃತ್ತಿಶಿಕ್ಷಕರ ವೃಂದದ ಹಿರಿಯ ಸಹಾಯಕ ನಿರ್ದೇಶಕರು (ಕ್ರಾಫ್ಟ್) ವಿಷಯ ಪರಿವೀಕ್ಷಕರು (ಕ್ರಾಫ್ಟ್) ಮತ್ತು ಶೈಕ್ಷಣಿಕ ಸಹಾಯಕರು ವೃಂದಗಳಿಗೆ ಮೇಲೆ (2)ರಲ್ಲಿ ಓದಲಾದ ದಿನಾಂಕ 31.8.199 ರಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಈ ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿರುವಂತೆ ನೇಮಕಾತಿ ವಿಧಾನವನ್ನು ತಕ್ಷಣದಿಂದ ಜಾರಿ ಬರುವಂತೆ ನಿಗದಿಪಡಿಸಿದೆ.

ಈ ಆದೇಶವನ್ನು ಸಿಆಸುಇ (ಸೇವಾ ನಿಯಮ) ಇವರ ಅ.ಟಿ. ಸಂಖ್ಯೆ : ಸಿಆಸುಇ 87 ಸೇನಿಇ 2000 ದಿನಾಂಕ 6.4.2000 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಸ್.ಗೋಪಾಲ ಕೃಷ್ಣ)

| 1 | 2 | | |
|---|---|---|---|
| Senior Assistant Director of Public Instructions (Craft) Rs.7400-13120 | 01 | By promotion from the cadre of Subject Inspector (Crafts) on the basis of seniority-cum-merit. | Must have put in a minimum service of 3 years in the cadre of Subject Inspector (Craft). |
| Subject Inspector (Craft) Rs.6000-11200 | 27 | By promotion from the Cadre of Craft teacher Grade - I on the basis of Seniority-cum-merit. | I. Must have put in a minimum service of 3 years in the cadre Craft teacher grade - I and<br>II. Must have passed degree/diploma in Craft education or equivalent examination recognised by Goverment of Karnataka.<br>or<br>Must have passed degree and a certificate course in respect of Craft education or equivalent examination recognised by Government.<br>III. Must have passed the Departmental precribed examinations for Class-II posts in education Dept,. |
| Education Assistant (Craft) Rs.4150-7800. | 02 | Transfer from Craft teachers Grade - I working in the same scale. | |

(K.S. GOPALKRISHNA)
Under Secretary to Government,
Education Department.

PR-132